ಶ್ರೀ ಎಂ. ಗೋವರ್ಧನರಾವ್.—ಕನ್ನಡ ರಾಜ್ಯ ಭಾಷೆಯಾಗಬೇಕು, ಅದಕ್ಕೆ ಪ್ರೋತ್ಸಾ ಕೊಡಬೇಕು ಎಂಬುದನ್ನು ಪ್ರತಿಪಾದಿಸುತ್ತಾ ಈ ಮೂರು ಜನರಲ್ಲಿ ಮರಾಠಾರಾಧ್ಯರು ಮಾತ ಶಾಸ್ತ್ರಿಗಳೇನೋ ಕನ್ನಡದಲ್ಲೇ ಪ್ರಶ್ನೆಗಳನ್ನು ಕೇಳಿದರು. ಶ್ರೀಮಾನ್ ನರಸಿಂಹನ್‌ರವರು ಏ ಇಂಗ್ಲೀಷ್‌ನಲ್ಲಿ ಮಾತನಾಡುತ್ತಾರೆ ಎಂದು ಕೇಳುತ್ತೇನೆ.

ಶ್ರೀ ವಿಶ್ವನಾಥಸ್ವಾಮಿ.—ಕಮರ್ಷಿಯಲ್ ಬೇಸಿಸ್ ಮೇರೆ ಟೈಪ್‌ರೈಟರ್ಸ್‌ನ್ನು ಒದಗಿಸುವ ವುದಕ್ಕೆ ಪ್ರಯತ್ನ ಮಾಡಲಾಗಿದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಅವಶ್ಯಕತೆ ಬಂದಾಗ ಹಾಗೆ ಮಾಡಲಾಗುತ್ತದೆ.

Professors of Kannada in Government Colleges

39. Sri Y. S. PATIL (Graduates' Constituency).—

Will the Minister for Agriculture and Education be pleased to state :—

(*a*) the number of Professors working in the Department of Kannada in all the Government Colleges as on October 1967 ;

(*b*) the number of Professors appointed as Professors in Kannada ever since the estalishment of the 15 Government Colleges in the State ?

A.— Sri K. V. SHANKARA GOWDA (Minister for Agriculture and Education).—

(*a*) Nil.

(*b*) Nil.

ಶ್ರೀ ವೈ. ಎಸ್. ಪಾಟೀಲ್.—ಮೈಸೂರು ರಾಜ್ಯದ ಸರ್ಕಾರಿ ಕಾಲೇಜುಗಳಲ್ಲಿ ಕನ್ನಡಕ್ಕೆ ವಿದ್ಯಾರ್ಥಿಗಳಾದರೂ ಇದ್ದಾರೆಯೇ ?

ಶ್ರೀ ಕೆ. ವಿ. ಶಂಕರಗೌಡ.—ವಿದ್ಯಾರ್ಥಿಗಳು ಇದ್ದಾರೆ.

ಶ್ರೀ ಜೆ. ಬಿ. ಮರಾಠಾರಾಧ್ಯ.—ಕನ್ನಡ ಶಿಕ್ಷಣದಲ್ಲಿ ತರಬೇತಿಯಾದಂಥ ಪ್ರೊಫೆಸರುಗಳು, ರೀಡರುಗಳ ಅಭಾವದ ದೃಷ್ಟಿಯಿಂದ ಅಲ್ಲಿ ಯಾರೂ ಇಲ್ಲ ಅಂತ ನೇಮಕ ಮಾಡಿಲ್ಲವೋ ಅಥವಾ ಏನು ಕಾರಣದಿಂದ ನೇಮಕ ಮಾಡಿಲ್ಲ ?

ಶ್ರೀ ಕೆ. ವಿ. ಶಂಕರಗೌಡ.—ಕನ್ನಡ ಪ್ರೊಫೆಸರ್ ಹುದ್ದೆ ಇರುವುದು ಒಂದು. ಅದು ಬೆಂಗಳೂರು ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜಿನಲ್ಲಿ, ಇಂಟರ್‌ಸ್ಟೇಟ್ ಸೀನಿಯಾರಿಟಿ ವಿಷಯದಲ್ಲಿ ಸ್ವಲ್ಪ ತಾಪತ್ರಯವಾಗಿರುವುದರಿಂದ ನೇಮಕ ಮಾಡುವುದಕ್ಕೆ ಆಗಿಲ್ಲ, ಅದು ನಿರ್ಧಾರವಾದ ಮೇರೆ ಮಾಡಲಾಗುತ್ತದೆ.

ಶ್ರೀ ಜೆ. ಬಿ. ಮರಾಠಾರಾಧ್ಯ.—ಈ ಅಧಿಕಾರ ವರ್ಗದವರ ಗೊಂದಾಟದಲ್ಲಿ ಕನ್ನಡ ವಿಭಾಗಕ್ಕೆ ಸಂಬಂಧಪಟ್ಟವರು ಕಷ್ಟಪಡಬೇಕಾದ ಸ್ಥಿತಿ ಬಂದಿದೆ. ಅವರಿಗೆ ಏನಾದರೂ ಆರೋಕೇಷನ್‌ನಲ್ಲಿ ಪ್ರೊಫೆಸರ್ ಅಂತರೋ ರೀಡರ್ ಅಂತರೋ ನೇಮಕ ಮಾಡಿ. ಕನ್ನಡ ಪ್ರಾಧ್ಯಾಪಕರು ಇಲ್ಲದೇ ಇದ್ದರೆ ಕನ್ನಡಕ್ಕೆ ಸರ್ಕಾರ ಪ್ರೋತ್ಸಾಹ ಕಾಲೇಜು ಮಟ್ಟದಲ್ಲಿ ಕೊಡುತ್ತಿಲ್ಲ ಎಂದು ಅಪಾದನೆ ಬರುತ್ತದೆ ಎಂದು ಇದನ್ನು ತಿಳಿಸುತ್ತಾ ಇದ್ದೇನೆ.

ಶ್ರೀ ಕೆ. ವಿ. ಶಂಕರಗೌಡ.—ಅದಷ್ಟು ಶೀಘ್ರವಾಗಿ ಮಾಡುತ್ತೇವೆ.

ಶ್ರೀ ಎಂ. ಪಿ. ಎಲ್. ಶಾಸ್ತ್ರಿ.—ಸರ್ಕಾರಿ ಕಾಲೇಜುಗಳಲ್ಲಿ ಈ ಪ್ರಾಧ್ಯಾಪಕರನ್ನು ನೇಮಿಸುವಾಗ ಅಲ್ಲಿ ಆ ವಿಷಯವನ್ನು ಪ್ಯಾಸಿಂಗ್ ಮಾಡತಕ್ಕ ವಿದ್ಯಾರ್ಥಿಗಳ ಸಂಖ್ಯೆಯ ಮೇರೆ ಏರ್ಪಾಡು ಮಾಡುತ್ತೀರಾ ಅಥವಾ ಆ ವಿಷಯದ ಪ್ರಾತಿನಿಧ್ಯದ ದೃಷ್ಟಿಯಿಂದ ನೇಮಕ ಮಾಡುತ್ತೀರಾ ?

ಶ್ರೀ ಕೆ. ಎ. ಶಂಕರಗೌಡ.—ಅಲ್ಲಿ ಓದತಕ್ಕ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಆ ವಿದ್ಯಾರ್ಥಿಗಳ ಹೆಸ್ಕಿ ಎಷ್ಟು ಜನ ಆ ವಿಷಯವನ್ನು ತಮ್ಮ ವಿದ್ಯಾಭ್ಯಾಸದ ಭಾಗವಾಗಿ ಹೊಂದಿದ್ದಾರೆ ಎಂಬುದನ್ನು ನೋಡಿ ತೀರ್ಮಾನಿಸಲಾಗುತ್ತದೆ.

ಶ್ರೀ ಎಂ. ಪಿ. ಎರ್. ಶಾಸ್ತ್ರಿ.—ಈ ಕಾಲೇಜುಗಳಲ್ಲಿ ವ್ಯಾಸಂಗ ಮಾಡತಕ್ಕ ವಿದ್ಯಾರ್ಥಿಗಳ ಸಂಖ್ಯೆಯ ದೃಷ್ಟಿಯಿಂದ ನೋಡುವುದಾದರೆ ಕನ್ನಡ ಭಾಷೆಯನ್ನು ವ್ಯಾಸಂಗ ಮಾಡತಕ್ಕ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಸಂಖ್ಯೆ ಬಹಳ ಹೆಚ್ಚಾಗಿರುವುದರಿಂದ ಈ ಕನ್ನಡ ಅಧ್ಯಾಪಕರ ನೇಮಕವಾಗಬೇಕು ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಎ. ಶಂಕರಗೌಡ.—ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜಿನಲ್ಲಿ ಅದಕ್ಕಾಗಿಯೇ ಒಂದು ಹುದ್ದೆಯನ್ನು ಏರ್ಪಾಡು ಮಾಡಿದ್ದೇವೆ. ಅದನ್ನು ಭರ್ತಿಮಾಡುವುದಕ್ಕೆ ಆಗಿಲ್ಲ, ಇಂಟರ್‌ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಅಡ್ಡಿ ಬಂದಿದೆ ಎಂದು ಹೇಳಿದ್ದೇನೆ.

ಶ್ರೀ ಎಸ್. ಪಿ. ರಾಜಣ್ಣ.—ಗವರ್ನಮೆಂಟ್ ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜಿನಲ್ಲಿ ಒಂದು ಪ್ರೊಫೆಸರರ ಪೋಸ್ಟ್ ಇದೆ ಎಂದು ಹೇಳಿದಿರಿ. ಅದು ಅಲ್ಲಿಯೇ ಇದೆಯೇ ಅಥವಾ ಬೆಂಗಳೂರು ಯೂನಿವರ್ಸಿಟಿಗೆ ಅದನ್ನು ಟ್ರಾನ್ಸ್‌ಫರ್ ಮಾಡಿದ್ದೀರಾ ?

ಶ್ರೀ ಕೆ. ಎ. ಶಂಕರಗೌಡ.—ಅಲ್ಲಿಯೇ ಇದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಮಹಾರಾಣಿ ಕಾಲೇಜಿಗೆ ಪ್ರೊಫೆಸರರನ್ನು ನೇಮಕ ಮಾಡುವಾಗ ಹೆಂಗಸರನ್ನು ನೇಮಕ ಮಾಡುವುದರಿಂದ ಅನುಕೂಲವಾಗುತ್ತದೆ ಎಂಬುದು ಗೊತ್ತೆ ?

ಶ್ರೀ ಕೆ. ಎ. ಶಂಕರಗೌಡ.—ಅಂತಹ ಅರ್ಹತೆ ಇರತಕ್ಕವರು ಬಂದರೆ ಅವರನ್ನೇ ನೇಮಕ ಮಾಡಲಾಗುತ್ತದೆ.

ಶ್ರೀ ಎಂ. ಪಿ. ಎರ್. ಶಾಸ್ತ್ರಿ.—ಈಗ ಸರ್ಕಾರಿ ಕಾಲೇಜುಗಳಲ್ಲಿ ಅಧ್ಯಾಪಕರ ವರ್ಗಾವರ್ಗಿ ಆಗುವಾಗ, ನೇಮಕವಾಗುವಾಗ, ಲಿಂಗ ಮತ್ತು ಜಾತಿ, ಕುಲ, ಬಣ್ಣದ ಮೇರೆ ಮಾಡುತ್ತಾ ಇಲ್ಲ, ಅಲ್ಲವೇ ? ಅವರ ಅರ್ಹತೆಯ ಮೇರೆ ತಾನೆ ಅದು ಆಗುತ್ತಾ ಇರುವುದು ?

ಶ್ರೀ ಕೆ. ಎ. ಶಂಕರಗೌಡ.—ಹೌದು.

ಶ್ರೀ ಎಂ. ಪಿ. ಎರ್. ಶಾಸ್ತ್ರಿ.—ಈ ದೃಷ್ಟಿಯಿಂದ ಹೆಂಗಸರ ಕಾಲೇಜಿಗಾದರೂ ಕೂಡ ಗಂಡಸರು ಅರ್ಹರಾಗಿರತಕ್ಕವರು ಇದ್ದ ಪಕ್ಷದಲ್ಲಿ ಅವರು ಸೀನಿಯಾರಿಟಿ ಪಡೆದಿದ್ದ ಪಕ್ಷದಲ್ಲಿ ಅವರನ್ನು ತಳ್ಳಿಹಾಕಿ ಹೆಂಗಸರು ಎಂಬ ದೃಷ್ಟಿಯಿಂದ ಹೆಂಗಸರ ಕಾಲೇಜಿಗೆ ಹೆಂಗಸರನ್ನೇ ಅಧ್ಯಾಪಕರನ್ನಾಗಿ ನೇಮಕ ಮಾಡುವುದಿಲ್ಲ ಅಲ್ಲವೇ ?

ಶ್ರೀ ಕೆ. ಎ. ಶಂಕರಗೌಡ.—ಬರೀ ಹೆಂಗಸರು ಅಂತ ನೇಮಕ ಮಾಡುವುದಕ್ಕಾಗುವುದಿಲ್ಲ; ಅರ್ಹತೆ, ಸೀನಿಯಾರಿಟಿ ಪಡೆದುಕೊಂಡಿದ್ದರೆ ಮಾಡಬೇಕಾಗುತ್ತದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.— ಸರ್ಕಾರದವರು ಸದಾ ಕಾಲದಲ್ಲೂ ಯಾವ ಶಿಕ್ಷಕ ವರ್ಗವನ್ನೇ ಆಗಲಿ ಅವರ ದಕ್ಷತೆ ಮತ್ತು ವಿದ್ಯಾ ಅರ್ಹತೆಗಳ ಆಧಾರವನ್ನೇ ಅನ್ವಯಿಸಿ ಅವರನ್ನು ನೇಮಕ ಮಾಡುತ್ತಾರೆಯೇ ಏನಾ ಬೇರೆ ಯಾವ ಅರ್ಹತೆಯನ್ನೂ ಆಧಾರವಾಗಿಟ್ಟುಕೊಳ್ಳುವುದಿಲ್ಲ ಅನ್ನುವುದು ನಿಜವಲ್ಲವೇ ?

ಶ್ರೀ ಕೆ. ಎ. ಶಂಕರಗೌಡ.—ಹೌದು.

State Adult Education

40. Sri Y. S. PATIL (Graduates' Constituency).—

Will the Minister for Agriculture and Education be pleased to state :—

(*a*) the net amount spent on State Adult Education Council ;

(*b*) the number of Schools and Libraries that it is running ?